**Crl.Mis 213/2023** ಪಿ.ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ **29.09.2025** ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ನೀಡಲಾಯಿತು.

ಪಾಟಿ ಸವಾಲು ಶ್ರೀ . ನ್ಯಾಯಾವಾದಿಗಳಿಂದಃ

ನಾನು **9** ನೇ ತರಗತಿಯವರಗೆ ಓದಿರುತ್ತೇನೆ. ಈಗ ನಾನು ಚಂದಗಾಲ ಗ್ರಾಮದಲ್ಲಿ ವಾಸ ಇದ್ದೇನೆ. ನಮ್ಮ ವಿವಾಹವು ಗುರು ಹಿರಿಯರ ಸಮ್ಮುಖದಲ್ಲಿ ನಮ್ಮ ಸಂಪ್ರಾದಾಯದಂತೆ ಆಗಿರುತ್ತದೆ. ಮದುವೆಯ ಮಾತುಕತೆಯ ಸಂದರ್ಭದಲ್ಲಿ ನಮ್ಮ ಕುಟುಂಬದಿಂದ ನನ್ನ ತಾಯಿ , ನನ್ನ ಚಿಕ್ಕಮ್ಮ ಮತ್ತು ನನ್ನ ಅತ್ತೆ ಮಗ ಅರ್ಜುನ್ ಸೇರಿದ್ದರು. ಅದೇ ರೀತಿ **1** ನೇ ಅರ್ಜಿದಾರರ ಕುಟುಂಬದಿಂದ ಅರ್ಜಿದಾರರ ತಾಯಿ, ಅವರ ಚಿಕ್ಕಪ್ಪ ಮತ್ತು ಮತ್ತೊಬ್ಬರು ಸೇರಿದ್ದರು.

**2.** ಏನು ಮಾತುಕತೆಯು ನಡೆಯಿತು ಎಂದು ನನಗೆ ಗೊತ್ತಿಲ್ಲ. ಮಾತುಕತೆಗೆ ನಾನು ಹೊಗಿರಲಿಲ್ಲ. ನನಗೆ ಮದುವೆ ಒಪ್ಪಿಗೆ ಇತ್ತು. **1** ನೇ ಅರ್ಜಿದಾರರ ಊರಿನಲ್ಲೇ ಮದುವೆಗೆ ಒಪ್ಪಿಗೆಯನ್ನು ಕೊಟ್ಟಿದ್ದೆ. ವರದಕ್ಷಿಣೆ ಕೊಡುವುದರ ಬಗ್ಗೆ ಮಾತುಕತೆಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಮದುವೆಯ ಸಂದರ್ಭದಲ್ಲಿ **1** ನೇ ಅರ್ಜಿದಾರರ ಕುಟುಂಬದಿಂದ ನಾನು ಚಿನ್ನದ ಒಡವೆಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**3.** ಮದುವೆಯಾದ ಮೇಲೆ ನಾನು ನಮ್ಮ ಊರಾದ ಚಂದಗಾಲದಲ್ಲಿ ನಮ್ಮ ಜೀವನವನ್ನು ಪ್ರಾರಂಭಿಸಿರುತ್ತೇವೆ. ಸುಮಾರು **4** ತಿಂಗಳವರೆಗೆ ಚಂದಗಾಲ ಗ್ರಾಮದಲ್ಲಿ ವಾಸ ಇದ್ದೇವು. ಅನಂತರ ಬೆಂಗಳೂರಿಗೆ ಹೋಗಿರುತ್ತೇವೆ. ಬೆಂಗಳೂರಿನಲ್ಲಿ ಸುಮಾರು **6** ತಿಂಗಳ ವರೆಗೆ ವಾಸ ಇದ್ದೇವು. ಬೆಂಗಳೂರಿನ **BTM** ಲೇಔಟ್ನ **SLR** ಬಾರ್ ನಲ್ಲಿ ಕ್ಲೀನಿಂಗ್ ಕೆಲಸವನ್ನು ಮಾಡುತ್ತಿದ್ದೆ. ಆ ಕೆಲಸಕ್ಕೆ ನನಗೆ ಪ್ರತಿ ತಿಂಗಳು **8,000/-**ಸಂಬಳ ಕೊಡುತ್ತಿದ್ದರು.

**4.** ಮದುವೆಯಾದ **1-1½** ವರ್ಷದ ಅವಧಿಯಲ್ಲಿ ನಮಗೆ **2** ನೇ ಅರ್ಜಿದಾರರು ಜನಿಸಿರುತ್ತಾರೆ. ಮದುವೆಯಾದ **3** ತಿಂಗಳು ಮಾತ್ರ ನಾವು ಅನ್ಯೋನ್ಯವಾಗಿ ಇದ್ದೇವು. ಸಾಕ್ಷಿಯು ಮುಂದುವರೆದು ಮದುವೆಯಾದ **3** ತಿಂಗಳ ನಂತರದಲ್ಲಿ **1** ನೇ ಅರ್ಜಿದಾರರು ನೀವು ಓದಿರುವುದಿಲ್ಲ ನನಗೆ ನೀವು ಬೇಡ ನನಗೆ ವಿವಾಹ ವಿಚ್ಛೇಧನ ಕೊಡುವಂತೆ ಕೇಳುತ್ತಿದ್ದರು ಎಂದು ನುಡಿಯುತ್ತಾರೆ.

**5.** ಮದುವಯಾದ **1-1 ½** ವರ್ಪದ ವರೆಗೆ ಮಾತ್ರ ನಾವು ಜೊತೆಯಲ್ಲಿ ಇದ್ದೇವು. **2** ನೇ ಅರ್ಜಿದಾರರು ಜನಿಸಿದ ನಂತರ ನಾವು ಬೇರೆಯಾಗಿ ಇದ್ದೇವು. **1** ನೇ ಅರ್ಜಿದಾರರು **2** ನೇ ಅರ್ಜಿದಾರರಿಗೆ ಮಂಡ್ಯದ ಖಾಸಗಿ ಆಸ್ಪತ್ರೆಯಲ್ಲಿ ಜನ್ಮ ನೀಡಿರುತ್ತಾರೆ. ಸದರಿ ಆಸ್ಪತ್ರೆ ಯ ಹೆಸರು ನನಗೆ ನೆನಪಿಲ್ಲ. **2** ನೇ ಅರ್ಜಿದಾರರು ಜನಿಸಿದಾಗ ಅದನ್ನು ನೋಡಲು ನಾನು ಹೋಗಿದ್ದೆ. ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ನಾನೇ ಭರಿಸಿರುತ್ತೇನೆ. ಸುಮಾರು **25** ಸಾವಿರ ರೂ. ಖರ್ಚು ಆಗಿರುತ್ತದೆ. ಆ ಬಗ್ಗ ದಾಖಲೆಯನ್ನು ಕೊಡಲು ತೊಂದರೆ ಇದೇಯಾ ಎಂದರೆ ಸಾಕ್ಷಿಯು ತುಂಬಾ ವರ್ಷಗಳು ಆಗಿದ್ದು ಆಸ್ಪತ್ರೆಯಲ್ಲಿ ಕೇಳಿ ತಂದು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ.

**6.** **1** ನೇ ಅರ್ಜಿದಾರರ ಬಾಣಂತನಕ್ಕೆ ಅವರ ತಾಯಿ ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿರುತ್ತೇನೆ. ಪ್ರತಿ ತಿಂಗಳಿಗೆ **2** ಭಾರಿ **1** ಮತ್ತು **2** ನೇ ಅರ್ಜಿದಾರರನ್ನು ನೋಡಲು ಹೋಗುತ್ತಿದ್ದೆ. ಈ ರೀತಿ **2** ನೇ ಅರ್ಜಿದಾರಿಗೆ **9** ತಿಂಗಳು ತುಂಬುವವರೆಗೂ ಹೋಗಿ ನೋಡಿಕೊಂಡು ಬರುತ್ತಿದ್ದೆ. **1** ನೇ ಅರ್ಜಿದಾರರ ಬಾಣಂತನದ ಸಂದರ್ಭದಲ್ಲಿ ಸುಮಾರು **5-6** ಸಲ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆ ಬಗ್ಗ ದಾಖಲೆಗಳು ಇರುವುದಿಲ್ಲ.

**7.** ವಿವಾಹ ವಿಚ್ಛೇಧನಕ್ಕೆ **1** ನೇ ಅರ್ಜಿದಾರರು ಯಾವಾಗ ಅರ್ಜಿ ಸಲ್ಲಿಸಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು **2** ನೇ ಅರ್ಜಿದಾರರಿಗೆ **9** ತಿಂಗಳು ತುಂಬಿದ ನಂತರ ವಾಪಸ್ಸು ನಮ್ಮ ಮನೆಗೆ ಬಂದಿದ್ದು, ವಾಪಸ್ಸು ಬಂದ **1** ತಿಂಗಳಲ್ಲೇ ನಮ್ಮ ಜೊತೆ ಜಗಳ ಮಾಡಿ ನನಗೆ ಮತ್ತು ನನ್ನ ತಾಯಿಗೆ ಹಲ್ಲೆ ಮಾಡಿ ನನ್ನ ಜೊತೆ ಜೀವನ ಮಾಡುವುದಿಲ್ಲ ಎಂದು ಅವರ ತವರು ಮನೆಗೆ ವಾಪಸ್ಸು ಹೋದರು. ಆಗ ಊರಿನಲ್ಲಿ ಹಿರಿಯರು ನ್ಯಾಯಾ ಪಂಚಾಯ್ತಿ

ಮಾಡಿದ್ದು, ಆಗ ತನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋದರೆ ಮಾತ್ರ ಜೊತೆಯಲ್ಲಿ ಜೀವನ ಮಾಡುತ್ತೇನೆ ಎಂದು **1** ನೇ ಅರ್ಜಿದಾರರು ಹೇಳಿದ್ದು, ಆ ಪ್ರಕಾರ ನಾನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿಗೆ ಹೋದ **3** ತಿಂಗಳಲ್ಲೇ ಮತ್ತೆ ನನ್ನ ಮೇಲೆ ದೂರು ಸಲ್ಲಿಸಿ ವಾಪಸ್ಸು ಅವರ ತವರು ಮನೆಗೆ ಹೋದರು ಎಂದು ನುಡಿಯುತ್ತಾರೆ.

**8.** ನನ್ನ ತಾಯಿ **1** ನೇ ಅರ್ಜಿದಾರರಿಗೆ ಹೊಡೆಯುತ್ತಾರೆ ಎಂದು **1** ನೇ ಅರ್ಜಿದಾರರು ನನ್ನ, ನನ್ನ ತಾಯಿ ಮತ್ತು ನನ್ನ ಇಬ್ಬರು ತಮ್ಮಂದಿರ ಮೇಲೆ ದೂರನ್ನು ಕೊಟ್ಟಿದ್ದರು. ನಾನು , ನನ್ನ ತಾಯಿ ಮತ್ತು ನನ್ನ ಇಬ್ಬರು ತಮ್ಮಂದಿರು ಒಟ್ಟು ಕುಟುಂಬದಲ್ಲಿ ವಾಸ ಇದ್ದೇವೆ. ಬೆಂಗಳೂರಿನಲ್ಲಿ ಇದ್ದಾಗ ನನ್ನ ಮೇಲೆ ಮಾತ್ರ ದೂರನ್ನು ಕೊಟ್ಟಿದ್ದರು.ನಾನು **1** ನೇ ಅರ್ಜಿದಾರರಿಗೆ ಹೊಡೆಯುತ್ತೇನೆ ಎಂದು ನನ್ನ ವಿರುದ್ದ ದೂರು ಸಲ್ಲಿಸಿದ್ದರು.

**9.** ಬಾಣಂತನ ಮೂಗಿಸಿಕೊಂಡು **1** ನೇ ಅರ್ಜಿದಾರರು ನಮ್ಮ ಮನೆಗೆ ಬಂದಿದ್ದಾಗ ನಾನು, ನನ್ನ ತಾಯಿ ಮತ್ತು ನಮ್ಮ ತಮ್ಮಂದಿರು **1** ನೇ ಅರ್ಜಿದಾರರಿಗೆ ಹಿಂಸೆ ನೀಡಿದ್ದರಿಂದ **1** ನೇ ಅರ್ಜಿದಾರರು ನಮ್ಮಗಳ ವಿರುದ್ದ ಪೋಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಪೋಲೀಸ್ ಠಾಣೆಯಲ್ಲಿ ಪೋಲೀಸರು ರಾಜಿ ಮಾಡಿ ಕಳುಹಿಸಿರುತ್ತಾರೆ.

**10.** ನ್ಯಾಯಾ ಪಂಚಾಯ್ತಿ ಸೇರಿದ್ದಾಗ ಊರಿನಲ್ಲಿ ವಾಸ ಇರುವುದು ಬೇಡ, ಬೆಂಗಳೂರಿಗೆ ಹೋಗಿ ವಾಸ ಮಾಡಿ ಎಂದು ಹೇಳಿ ನನ್ನನ್ನು ಮತ್ತು **1** ನೇ ಅರ್ಜಿದಾರರನ್ನು ಬೆಂಗಳುರಿಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿ . ಬೆಂಗಳೂರಿನಲ್ಲಿ ನಾನು **1** ನೇ ಅರ್ಜಿದಾರರಿಗೆ ಹೊಡೆದು ಬಡೆದು ಚಿತ್ರ ಹಿಂಸೆ ಕೊಟ್ಟಿದರಿಂದ ನನ್ನ ವಿರುದ್ದ ಪೋಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

**11.** ನನ್ನ ಮತ್ತು ನಮ್ಮ ಕುಟುಂಬದವರ ವಿರುದ್ದ ದೂರನ್ನು ಕೊಟ್ಟಿದ್ದರಿಂದ ನಾನು ವಿವಾಹ ವಿಚ್ಛೇಧನ ಕೋರಿ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ವಿವಾಹ ವಿಚ್ಛೇಧನದ ತೀರ್ಪು ಮತ್ತು ಡಿಕ್ರಿಯನ್ನು ನಾನು ಓದಿರುತ್ತೇನೆ. ವಿವಾಹ ವಿಚ್ಛೇಧನ ಕೋರಿ

ಸಲ್ಲಿಸಿದ್ದ ಅರ್ಜಿಯಲ್ಲಿ ಈ ಪ್ರಕರಣದ **1** ನೇ ಅರ್ಜಿದಾರರಿಗೆ ಮಧ್ಯಂತರ ಜೀವಾನಂಶವನ್ನು ಪಾವತಿಸಲು ಆದೇಶವಾಗಿದ್ದು, ಆ ಪ್ರಕಾರ ತಾವು ಮಧ್ಯಾಂತರ ಜೀವಾನಂಶವನ್ನು ಪಾವತಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು **2** ನೇ ಅರ್ಜಿದಾರರ ವಿಧ್ಯಾಭ್ಯಾಸಕ್ಕಾಗಿ ಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಿವಾಹ ವಿಚ್ಚೇಧನ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ವಿವಾಹ ವಿಚ್ಚೇಧನ ಆಗುವವರೆಗೂ ಪ್ರತಿ ತಿಂಗಳು **3500/-** ರೂ.ಗಳನ್ನು ಜೀವನಾಂಶವನ್ನು ಪಾವತಿ ಮಾಡಿಕೊಂಡು ಬಂದಿದ್ದೇನೆ. ಪ್ರತಿ ತಿಂಗಳು ನ್ಯಾಯಾಲಯದಲ್ಲೇ ಪಾವತಿ ಮಾಡಿಕೊಂಡು ಬಂದಿರುತ್ತೇನೆ. ವಿವಾಹ ವಿಚ್ಚೇಧನದ ತೀರ್ಪು ಆದ ನಂತರದಿಂದ ಜೀವನಾಂಶವನ್ನು ಪಾವತಿ ಮಾಡಿರುವುದಿಲ್ಲ.

**12. 2** ನೇ ಅರ್ಜಿದಾರರು **3** ನೇ ತರಗತಿಯನ್ನು ಓದುತ್ತಿದ್ದಾರೆ. **2** ನೇಅರ್ಜಿದಾರರ ಶಾಲೆಯ ಪ್ರಾವೇಶಾತಿ ಶುಲ್ಕವನ್ನು ನಾನೇ ನ್ಯಾಯಾಲಯದಲ್ಲಿ ಪಾವತಿ ಮಾಡಿರುತ್ತೇನೆ. ಯಾವ ಶಾಲೆಗೆ **2** ನೇ ಅರ್ಜಿದಾರರನ್ನು **1** ಮತ್ತು **2** ನೇ ತರಗತಿಗೆ ದಾಖಲಿಸಲಾಗಿತ್ತು ಎಂದು ನನಗೆ ಈಗ ನೆನಪಿಲ್ಲ. ನಾನು ಶಾಲೆಗೆ ಹೋಗಿ **2** ನೇ ಅರ್ಜಿದಾರರ ಶುಲ್ಕವನ್ನು ಪಾವತಿ ಮಾಡಿರುವುದಿಲ್ಲ ಆದರೆ ಅದರ ಶುಲ್ಕವನ್ನು ನ್ಯಾಯಾಲಯದಲ್ಲೇ **1** ನೇ ಅರ್ಜಿದಾರರಿಗೆ ನೀಡಿದ್ದೆ. ಶಾಲೆಯ ಶುಲ್ಕ ಎಷ್ಟು ಇತ್ತು ಎಂದು ನನಗೆ ಗೊತ್ತಿರಲಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ